ಸಾವಿರ ಲೀಟರ್‌ವರೆಗೆ ಮಾತ್ರ ಆ ವಿನಾಯಿತಿ ಇರುತ್ತದೆಂದು ಪ್ರಕಟಣೆ ಇದೆ. ಆದರೆ ಒಂದು ತಿಂಗಳಿಗೆ ಒಂದು ದೋಣಿಗೆ 45 ರಿಂದ 50 ಸಾವಿರ ಲೀಟರ್ ಡೀಸೆಲ್ ಉಪಯೋಗವಾಗುತ್ತದೆ. ಆದ್ದರಿಂದ ಮೀನುಗಾರರಿಗೆ ಇದರಿಂದ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಇದರ ಜೊತೆಗೆ ಮೀನನ್ನು ಒಣಗಿಸುವ ಜಾಗವೇನಿದೆ ಅದಕ್ಕೆ ಹತ್ತರಷ್ಟು ನೆಲಬಾಡಿಗೆಯನ್ನು ಏರಿಸಿದರೆ ಬಹಳ ತೊಂದರೆಯಾಗುತ್ತದೆ, ಆದ್ದರಿಂದ ಮತ್ಸ್ಯಕ್ಷಾಮದಿಂದ ಬಳಲುತ್ತಿರುವ ಮೀನುಗಾರರ ಕ್ಷೇಮಕ್ಕೋಸ್ಕರ ತಾವು ಖಂಡಿತವಾಗಿ ಹಿಂದಿನ ಬಾಡಿಗೆಯನ್ನು ನಿಗದಿ ಪಡಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ (ಬಂದರು ಮತ್ತು ಮೀನುಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದು ಸತ್ಯ. ಪತ್ರಿಕೆಯಲ್ಲಿ ಪ್ರಕಟವಾಗುವಾಗ ಅದು ತಪ್ಪಾಗಿ ಬಂದಿದೆ. ಹತ್ತು ಸಾವಿರ ಕಿಲೋಲೀಟರ್ ಎಂದು ಬರಬೇಕಾಗಿತ್ತು ಆದರೆ ಅದು ಮೂವತ್ತು ಸಾವಿರ ಲೀಟರ್ ಎಂದು ಬಂದಿದೆ. ಇದರ ಬಗ್ಗೆ ನಿನ್ನೆ ಹಣಕಾಸು ಸಚಿವರ ಜೊತೆ ಚರ್ಚೆ ಮಾಡಿದೆ. ಆಗ ಅವರು ಮೂವತ್ತು ಸಾವಿರ ಲೀಟರ್‌ಗೆ ಮಾತ್ರವಲ್ಲ ಮೀನುಗಾರರು ಉಪಯೋಗ ಮಾಡುವ ಡೀಸೆಲ್‌ಗೆ ಪೂರ್ಣವಾಗಿ ಮಾರಾಟ ತೆರಿಗೆ ವಿನಾಯಿತಿ ಕೊಡುವುದಾಗಿ ಹೇಳಿದ್ದಾರೆ. ಆದರೆ ಆ ರೀತಿ ವಿನಾಯಿತಿ ಕೊಡುವಾಗ ಅದರ ದುರುಪಯೋಗವಾಗದಂತೆ ನಾವು ಕ್ರಮ ತೆಗೆದುಕೊಳ್ಳಬೇಕಾಗಿದೆ. ಅದಕ್ಕೆ ಮೀನುಗಾರರು ಸಹಕಾರವನ್ನು ಕೊಡಬೇಕು. ಇನ್ನು ಮೀನನ್ನು ಒಣಗಿಸುವ ನೆಲದ ಬಾಡಿಗೆಯ ಬಗ್ಗೆ ಹೇಳುವುದಾದರೆ, ಅಧಿಕಾರಿಗಳೇನು ಪೆನಾಲ್ಟಿಯನ್ನು ಹಾಕಿದ್ದಾರೆ ಅದನ್ನು ವಸೂಲಿ ಮಾಡಬಾರದೆಂದು ಸೂಚನೆ ಕೊಟ್ಟಿದ್ದೇನೆ. ಮೀನುಗಾರರ ಮಟ್ಟಿಗೆ ನೆಲಬಾಡಿಗೆಯನ್ನು ಕಡಿಮೆ ಮಾಡುವ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ.

(ಓ) ಕೃಷ್ಣಮೇಲ್ದಂಡೆ ಯೋಜನೆಯಲ್ಲಿ ಮಳುಗಡೆಯಾದ ಅನೇಕ ಗ್ರಾಮೀಣ ಭಾಗದ ದೇವಸ್ಥಾನಗಳ ಕುರಿತು

ಶ್ರೀ ಪ್ರಹ್ಲಾದ್ ಹನುಮಂತಪ್ಪ ಪೂಜಾರ್ (ಬಾಗಲಕೋಟೆ) : ಮಾನ್ಯ ಅಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾಗತಕ್ಕಂಥ ಅನೇಕ ಗ್ರಾಮೀಣ ಭಾಗದ ದೇವಸ್ಥಾನದ ಬಗ್ಗೆ ವಿಷಯ ಮಂಡನೆ ಮಾಡಲು ಇಚ್ಛೆಪಡುತ್ತಿದ್ದೇನೆ. ಕೃಷ್ಣಾ ಕೊಳ್ಳದ ಯೋಜನೆಯಿಂದ ಅಲ್ಲಿ ಬರುವ ಐತಿಹಾಸಿಕ, ಧಾರ್ಮಿಕ ಸಾಂಸ್ಕೃತಿಕ ಮಹತ್ವ ಪಡೆದಿರುವ ಕೇಂದ್ರಗಳು ಅನಿವಾರ್ಯವಾಗಿ ನೀರಿನ ಪಾಲಾಗುವುದನ್ನು ನಾವುಗಳು ತಪ್ಪಿಸಲು ಸಾಧ್ಯವಾಗುವುದಿಲ್ಲ. ಜಗಜ್ಯೋತಿ ಬಸವೇಶ್ವರ ಐಕ್ಯ ಕೇಂದ್ರವಾದ ಕೂಡಲಸಂಗಮ ಮಂಟಪದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಅವರ ಸಚಿವಸಂಪುಟದ ಸಹೋದ್ಯೋಗಿಗಳಾದ ಎಂ. ಪಿ. ಪ್ರಕಾಶ್‌ರವರು, ಕೆ. ಎನ್. ನಾಗೇಗೌಡರು ಎಲ್ಲರೂ ಬಂದು ಆ ಐಕ್ಯ ಕೇಂದ್ರದ ರಕ್ಷಣೆ ಕುರಿತಂತೆ ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾನು ಆ ಭಾಗದ ಜನಪ್ರತಿನಿಧಿಯಾಗಿ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಕೂಡಲಸಂಗಮದ ಬಗ್ಗೆ ಸರ್ಕಾರವೇನು ಕಳಕಳಿಯಿಂದ ಕೆಲಸ ಮಾಡುತ್ತಿದೆ.

7.50 ಪಿ. ಎಂ.

ಆದರೆ ಗ್ರಾಮೀಣ ಭಾಗದಲ್ಲಿ ಇಂತಹ ಮಹತ್ವ ಪಡೆದಂತಹ ಅನೇಕ ಧಾರ್ಮಿಕ ಕೇಂದ್ರಗಳು, ಮಠ, ಮಂದಿರಗಳೂ ಕೂಡ ಇವತ್ತು ಮುಳುಗಡೆಯಾಗುತ್ತಿವೆ. ಇದನ್ನು ತಪ್ಪಿಸುವುದಕ್ಕಾಗುತ್ತಿಲ್ಲ.

ಈ ಒಂದು ಹಿನ್ನೆಲೆಯಲ್ಲಿ ಕೂಡಲ ಸಂಗಮನಾಥನ ಬಗ್ಗೆ ಸರ್ಕಾರ ಹೇಗೆ ಕಾಳಜಿ ವಹಿಸಿದೆಯೋ ಅದೇ ರೀತಿ ಮುಳುಗಡೆಯಾಗುವಂತಹ ಅನೇಕ ಹಳ್ಳಿಗಳಲ್ಲಿರುವ ಮಹತ್ವವಾದಂತಹ ಧಾರ್ಮಿಕ ಕೇಂದ್ರಗಳ ಬಗ್ಗೆ ಸರ್ಕಾರ ನಿಷ್ಕಾಳಜಿ ವಹಿಸುವುದನ್ನು ತಪ್ಪಿಸಿ ಅದರ ಬಗ್ಗೆ ಕಾಳಜಿ ಮಾಡಬೇಕು. ಅವುಗಳ ಸುಂದರ ಕಲಾಕೃತಿಯ ಕುಸುರಿಯ ಒಳ್ಳೆಯ ಕೆತ್ತನೆಯ ಶಿಲೆಗಳು ಒಳ್ಳೆಯ ಕಟ್ಟಿಗೆಗಳು, ಲಕ್ಷಾಂತರ ರೂಪಾಯಿಗಳು ಬೆಲೆಬಾಳುವ ಮಠ ಮಂದಿರಗಳ ಸೊತ್ತು ಇವತ್ತು ನಿರಾಯಾಸವಾಗಿ ಮುಳುಗಿ ಹೋಗುತ್ತಿರುವ ನೋವನ್ನು ನಾವು ಅನುಭವಿಸುತ್ತಿದ್ದೇವೆ. ಮುಳುಗಡೆಯಾಗುವ ಹಳ್ಳಿಗಳ ವ್ಯಾಪ್ತಿಯಲ್ಲೇ ಬರುವಂತಹ ಚಿಕ್ಕ ಸಂಗಮನ ಒಂದು ಸಂಗಮನಾಥ ದೇವಸ್ಥಾನ, ಹೆಣ್ಣೂರಿನ ಲಕ್ಷ್ಮಿದೇವಿ ಗುಡಿ, ಹೇರಿಕಲ್ಲದ ಬಸವೇಶ್ವರ ದೇವಸ್ಥಾನ, ಕಮದಾದ ಆಂಜನೇಯ, ಈಲಾದ ಬೊಮ್ಮಲಿಂಗೇಶ್ವರ ಇಂತಹ ಮಹತ್ವ ಪಡೆದಂತಹ ದೇವಸ್ಥಾನಗಳೂ ಕೂಡ ಇವತ್ತು ಗಂಗೆಯ ಪಾಲಾಗುತ್ತಿವೆ. ಅವುಗಳ ಬಗ್ಗೆ ಕೂಡ ಸರ್ಕಾರ ಕಾಳಜಿ ವಹಿಸಿ ತಕ್ಷಣ ಇವುಗಳು ಮುಳುಗಡೆಯಾಗು ವಂತಹ ಹಿನ್ನೀರು ಬರುವಂತಹ ಈ ಸಂದರ್ಭದಲ್ಲಿ ಅಷ್ಟರೊಳಗಾಗಿ ಆ ದೇವಸ್ಥಾನಗಳ ಆ ಸೊತ್ತನ್ನು ಬೇರೆ ಕಡೆಗೆ ಸ್ಥಳಾಂತರ ಮಾಡಿ ಹಾನಿಗೊಳಗಾಗುವುದನ್ನು ತಪ್ಪಿಸಿ, ಸಾರ್ವಜನಿಕ ವಂತಿಗೆಯಿಂದ ಇವತ್ತೇನು ಆ ಮಂದಿರಗಳನ್ನು ಕಟ್ಟಿಸಿದ್ದಾರೋ, ಆ ಜನರ ಧಾರ್ಮಿಕ ಭಾವನೆಗಳಿಗೆ ಸರ್ಕಾರ ಮಹತ್ವ ಕೊಡಬೇಕು. ಪುನರ್ ವಸತಿ ಕೇಂದ್ರದಲ್ಲಿ ಅವುಗಳಿಗೆ ಜಾಗ ಕಲ್ಪಿಸಿ ಮತ್ತೊಮ್ಮೆ ಜನ ಆ ಸುಂದರ ದೇವಸ್ಥಾನಗಳನ್ನು, ಮಠ, ಮಂದಿರಗಳನ್ನು ಕಟ್ಟಿಸಲಿಕ್ಕೆ ಅವಕಾಶ ಮಾಡಿಕೊಡಬೇಕೆಂಬ ಮಾತನ್ನು ಹೇಳುತ್ತಾ, ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಂತಹ ವಸ್ತುಗಳನ್ನೂ ಕೂಡ ಸರ್ಕಾರ ಸಾಗಿಸಿ ಸಹಕರಿಸಬೇಕೆಂಬ ಒಂದು ವಿನಂತಿಯನ್ನು ತಮ್ಮ ಮೂಲಕ ಸರ್ಕಾರಕ್ಕೆ ನಾನು ಮಾಡುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಬರತಕ್ಕಂಥ ದೇವಸ್ಥಾನಗಳು, ಮಂದಿರಗಳು ಏನಿವೆ ಅವುಗಳ ದುರಸ್ತಿ, ಜೀರ್ಣೋದ್ಧಾರ ಕಾರ್ಯಗಳನ್ನು ಆಯಾ ದೇವಸ್ಥಾನ ಅಥವಾ ಮಂದಿರಗಳ ಕಮಿಟಿಯವರು ಮತ್ತು ಟ್ರಸ್ಟ್‌ನ ಅಧ್ಯಕ್ಷರು ಹಾಗೂ ಸಮಿತಿಯ ಸದಸ್ಯರುಗಳು ಅವರೇ ಮಾಡಿಕೊಳ್ಳಬೇಕೆಂಬ ನಿರ್ದೇಶನವನ್ನು ಸರ್ಕಾರದಿಂದ ಈಗಾಗಲೇ ನಾವು ಕಳುಹಿಸಿದ್ದೇವೆ. ಸರ್ಕಾರದಿಂದ ನೇರವಾಗಿ ನಾವೇ ಮಾಡುವಂತಾದ್ದು ಇಲ್ಲ. ಮತ್ತೊಮ್ಮೆ ಈಗ, ಮುಳುಗಡೆ ಆಗತಕ್ಕಂಥ ಅಥವಾ ಮುಳುಗಡೆಯಾಗುವ ದೇವಸ್ಥಾನಗಳಿಗೆ ಏನೇನು ಮಾಡಬೇಕೋ ಅದನ್ನು ಆ ಕಮಿಟಿಯವರು ಮಾಡಬೇಕು ಎಂದು ನಾವು ಸೂಚನೆಯನ್ನು ಕೊಡುತ್ತೇವೆ.

ಶ್ರೀ ಪ್ರಹ್ಲಾದ್ ಹನುಮಂತಪ್ಪ ಪೂಜಾರ್ : ಸರ್ಕಾರದವರೇ ಮುಂದೆ ಬಂದು ಆ ಕೆಲಸವನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ : ಅದನ್ನು ಪರಿಶೀಲನೆ ಮಾಡುತ್ತೇನೆ.

(ಅ) ಬಾಣಸವಾಡಿ ರೈಲ್ವೆ ಸ್ಟೇಷನ್‌ನಿಂದ ಸಿಟಿ ರೈಲ್ವೆ ಸ್ಟೇಷನ್‌ವರೆಗೆ ಹೊಸದಾಗಿ ಲೈನ್ ಹಾಕುವುದು.

ಶ್ರೀ ವಿ. ಶಿವರಾಜ್ (ಯಲಹಂಕ) : ಮಾನ್ಯ ಅಧ್ಯಕ್ಷರೆ, ಬಾಣಸವಾಡಿ ರೈಲ್ವೆ ಸ್ಟೇಷನ್‌ನಿಂದ ಸಿಟಿ ರೈಲ್ವೆ ಸ್ಟೇಷನ್‌ವರೆಗೂ ಕೂಡ ಈಗ ಹೊಸದಾಗಿ ರೈಲ್ವೆ ಲೈನ್ ಹಾಕಿ ಕನೆಕ್ಷನ್ ಮಾಡುವುದಕ್ಕೆ